ನೌಕರರು 1-7-84 ರ ನಂತರ ನೇಮಕಗೊಂಡಿರುತ್ತಾರೆ.

ಆ) 1-7-84 ರಂದು ಮತ್ತು ಅದರ ಹಿಂದೆ ನೇಮಕಗೊಂಡ ದಿನಗೂಲಿ ನೌಕರರನ್ನು ಸರ್ಕಾರದ ಆದೇಶ ಸಂಖ್ಯೆ : ಡಿಪಿಆರ್ 2 ಎಸ್ಎಲ್‌ಸಿ 90 ದಿನಾಂಕ 6-8-90 ರ ಪ್ರಕಾರ ಮಾಸಿಕ ವೇತನ ಸಿಬ್ಬಂದಿಯನ್ನಾಗಿ ಪರಿವರ್ತಿಸಿ ಅವರಿಗೆ ರೂ. 780-00 ಮಾಸಿಕ ವೇತನವನ್ನು ವಾರ್ಷಿಕ ವೇತನ ಬಡ್ತಿ ರೂ. 15-00 ನ್ನು ನೀಡಲಾಗುತ್ತದೆ. 1-7-84 ರ ನಂತರ ನೇಮಕಗೊಂಡ ದಿನಗೂಲಿ ನೌಕರರಿಗೆ ಆಯಾ ವೃತ್ತಗಳಲ್ಲಿ ಮಂಜೂರಾಗಿರುವ ದರಪಟ್ಟಿಯಂತೆ ದಿನಗೂಲಿಯನ್ನು ನೀಡಲಾಗುತ್ತದೆ.

ಇ) ಸರ್ಕಾರದ ಆದೇಶ ಸಂಖ್ಯೆ : ಡಿಪಿಆರ್ 2 ಎಸ್ಎಲ್‌ಸಿ 90 ದಿನಾಂಕ 6-8-90 ರ ಪ್ರಕಾರ 1-7-84 ರಂದು ಮತ್ತು ಅದರ ಹಿಂದೆ ನೇಮಕಗೊಂಡ ದಿನಗೂಲಿ ನೌಕರರನ್ನು ಮಾಸಿಕ ವೇತನ ಸಿಬ್ಬಂದಿಯನ್ನಾಗಿ ಪರಿವರ್ತಿಸಲು ಅವಕಾಶವಿದ್ದು ಅದರಂತೆಯೇ ಕ್ರಮ ಕೈಗೊಂಡು 3343 ದಿನಗೂಲಿ ನೌಕರರನ್ನು ಮಾಸಿಕ ವೇತನ ರಹಿತ ಸೂಪರ್‌ನ್ಯೂಮರರಿ ಹುದ್ದೆಯಲ್ಲಿ ನೇಮಿಸಲಾಗಿದೆ. ಇವರಲ್ಲಿ (ಸಿ) ದರ್ಜೆ 156, (ಡಿ) ದರ್ಜೆ 3187 ನೌಕರರಿರುತ್ತಾರೆ. ಮೇಲೆ ಹೇಳಿದ ಸರ್ಕಾರದ ಆದೇಶದಂತೆ 10 ವರ್ಷ ಸೇವೆ ಪೂರೈಸಿದ ದಿನಗೂಲಿ ನೌಕರರು : ಮಾಸಿಕ ವೇತನ ಸಿಬ್ಬಂದಿಯನ್ನು ಸಕ್ರಮಗೊಳಿಸಲು ಅವಕಾಶವಿದ್ದು ಅದರಂತೆಯೇ ಒಟ್ಟು 1037 ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲಾಗಿದೆ. ಇವರಲ್ಲಿ (ಸಿ) ದರ್ಜೆ 19, (ಡಿ) ದರ್ಜೆ 1018. 10 ವರ್ಷ ಸೇವೆ ಪೂರೈಸುವ ಅರ್ಹ ದಿನಗೂಲಿ ನೌಕರರನ್ನು ಅವರ ಸೇವೆ 10 ವರ್ಷ ಪೂರ್ಣಗೊಂಡಂತೆಯೇ ಸಕ್ರಮಗೊಳಿಸಲಾಗುವುದು.

<u>ವಿಷಯ : ರಾಜ್ಯದಲ್ಲಿ ಮೆಡಿಕಲ್ ಕಾಲೇಜುಗಳಿಗೆ ಮಂಜೂರಾತಿ ಕೋರಿ ಬಂದ ಅರ್ಜಿಗಳು.</u>

1290

ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸ ವೈದ್ಯಕೀಯ ಕಾಲೇಜು ಮಂಜೂರಾತಿ ಕೋರಿ ಸರ್ಕಾರಕ್ಕೆ ಎಷ್ಟು ಅರ್ಜಿಗಳು ಬಂದಿವೆ?

ಆ) ಸದರಿ ವಿದ್ಯಾಸಂಸ್ಥೆಗಳು ಯಾವುವು ವಿಳಾಸ ತಿಳಿಸಿ?

ಇ) ಹೊಸ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಲಾಗುವುದೇ?

ಈ) ಹೊಸ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡುವಾಗ ಸರ್ಕಾರ ಅನುಸರಿಸುವ ಕ್ರಮಗಳೇನು?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) 36.

ಆ) ವಿವರಗಳನ್ನು ಅನುಬಂಧ - ಎ ನಲ್ಲಿ ಲಗತ್ತಿಸಿದೆ.

ಇ) ಇಲ್ಲ.

ಈ) ಭಾರತ ವೈದ್ಯಕೀಯ ಪರಿಷತ್ತು ನಿಗಧಿಪಡಿಸಿರುವ ನಿಯಮಗಳು ಹಾಗೂ ಕೇಂದ್ರ ಸರ್ಕಾರದ ಭಾರತೀಯ ವೈದ್ಯ ಪರಿಷತ್ತಿನ 1992 ರ ಅಧ್ಯಾ ದೇಶದ ಪ್ರಕಾರ ಪರಿಶೀಲಿಸಲಾಗುವುದು.

ಅನುಬಂಧ - ಎ

ವೈದ್ಯಕೀಯ ಕಾಲೇಜು ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳು :

1. ಶ್ರೀ ಜಗದ್ಗುರು ಮುರುಘರಾಜೇಂದ್ರ ವಿದ್ಯಾಪೀಠ , ಚಿತ್ರದುರ್ಗ.
2. ಸಿದ್ದಗಂಗಾ ಎಜುಕೇಷನ್ ಸೊಸೈಟಿ, ತುಮಕೂರು.
3. ಆಲ್ ಮೊಹಮದ್ ಸೊಸೈಟಿ, ಭದ್ರಾವತಿ.
4. ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್, ಸುಳ್ಯ, ದಕ್ಷಿಣ ಕನ್ನಡ.
5. ಶರವೇಶ್ವರ ವಿದ್ಯಾಪೀಠ, ಬಳ್ಳಾರಿ.
6. ನಿಟ್ಟೆ ಎಜುಕೇಷನ್ ಟ್ರಸ್ಟ್, ಕಾರ್ಕಳ, ದಕ್ಷಿಣ ಕನ್ನಡ.
7. ಕರ್ನಾಟಕ ಲಾ ಸೊಸೈಟಿ, ಬೆಳಗಾಂ.
8. ಮಲೆನಾಡು ಮೆಡಿಕಲ್ ಕಾಲೇಜು, (ಬಿ.ಆರ್. ಅಂಬೇಡ್ಕರ್ ಮಿಷನ್) ಶಿವಮೊಗ್ಗ.
9. ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ.
10. ಫಾದರ್ ಮುಲ್ಲರ್ ಇನ್ಸ್ಟ್ಯೂಟ್, ಕಂಕನಾಡಿ, ಮಂಗಳೂರು.
11. ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್, ಶಿವಮೊಗ್ಗ.
12. ಶ್ರೀ ವೀಣಾ ಶಾರದಾ ಎಜುಕೇಷನ್ ಸೊಸೈಟಿ, ಹಾಸನ.
13. ತಾರಾನಾಥ್ ಶಿಕ್ಷಣ ಸಂಸ್ಥೆ, ರಾಯಚೂರು.
14. ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆ, ಬೀದರ್.
15. ಖಾಜಾ ಶಿಕ್ಷಣ ಸಂಸ್ಥೆ, ಗುಲ್ಬರ್ಗಾ.
16. ಆರ್ ಮಹಮದ್ ವಿದ್ಯಾಸಂಸ್ಥೆ, ಶಿವಮೊಗ್ಗ.
17. ಶರಬೇಶ್ವರ ವಿದ್ಯಾಪೀಠ, ಬಂಡಿಪೋಟ್, ಬಳ್ಳಾರಿ.
18. ನಾನಕಬೀರ್ ಫೌಂಡೇಷನ್, ಬೀದರ್.
19. ಜಗದ್ಗುರು ಮೂರು ಸಾವಿರದ ಮಠ, ಜೆ.ಜೆ. ಸಹಕಾರ ಸಂಘ, ರೂರಲ್ ಮೆಡಿಕಲ್ ಕಾಲೇಜು, ಹುಬ್ಬಳ್ಳಿ.
20. ಶ್ರೀ ವೀಣಾಶಾರದ ಎಜುಕೇಷನ್ ಸೊಸೈಟಿ, ಶಿವಮೊಗ್ಗ.
21. ಚಾಮುಂಡಿ ಮೆಡಿಕಲ್ ಫೌಂಡೇಷನ್, ಬೆಂಗಳೂರು.
22. ಕರ್ನಾಟಕ ಪಿಪಲ್ ಎಜುಕೇಷನ್ ಸೊಸೈಟಿ, ಗುಲ್ಬರ್ಗ.
23. ಶಾಂತಿವರ್ಧಕ ಸಂಸ್ಥೆ, ಬಾಲ್ಕಿ.
24. ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್ - ಯನಾರೆಯ, ಮಂಗಳೂರು
25. ಶ್ರೀನಿವಾಸ ಟ್ರಸ್ಟ್, ಬೆಂಗಳೂರು.
26. ಶ್ರೀ ಧರ್ಮಸ್ಥಳ ಮಂಜೂನಾಥೇಶ್ವರ ಶಿಕ್ಷಣ ಸಂಸ್ಥೆ ಉಜಿರೆ- ಧಾರವಾಡ.
27. ಸರ್ ಎಂ. ವಿಶ್ವೇಶ್ವರಯ್ಯ ಎಜುಕೇಷನ್ ಟ್ರಸ್ಟ್, ಕೋಲಾರ.
28. ಶರಾವತಿ ಎಜುಕೇಷನ್ ಟ್ರಸ್ಟ್ , ಶಿವಮೊಗ್ಗ.
29. ಶ್ರೀ ರಾಜೀವಗಾಂಧಿ ಎಜುಕೇಷನ್ ಟ್ರಸ್ಟ್ ,ಮೈಸೂರು.
30. ಎಲ್ಲಮ್ಮ ದಾಸಪ್ಪ ಟ್ರಸ್ಟ್ , ಶಿವಮೊಗ್ಗ.
31. ಪೀಪಲ್ಸ್ ಎಜುಕೇಷನ್ ಟ್ರಸ್ಟ್ , ಮಂಡ್ಯ
32. ಮಹಾತ್ಮಗಾಂಧಿ ವಿದ್ಯಾಪೀಠ ಟ್ರಸ್ಟ್, ಬೆಂಗಳೂರು.
33. ಕರ್ನಾಟಕ ಪ್ರದೇಶ ಕುರುಬರ ಸಂಘ ಶಿಕ್ಷಣ ಸಂಸ್ಥೆ, ಧಾರವಾಡ.
34. ಶ್ರೀಮತಿ ಕೆಂಪುಚಿಲುವಾಮ್ಮ ಎಜುಕೇಷನ್ ಟ್ರಸ್ಟ್ , ಮೈಸೂರು.

35. ಹೇಮಾವತಿ ಎಜುಕೇಷನ್ ಟ್ರಸ್ಟ್, ಹಾಸನ.
36. ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟೆ.

ವಿಷಯ : ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಕೇಂದ್ರಗಳ ಸಂಖ್ಯೆ :

1287

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಯಸ್ಕರ ಶಿಕ್ಷಣ ಕೇಂದ್ರಗಳ ಸಂಖ್ಯೆ ಎಷ್ಟು? (ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಧಾರವಾಡ ಜಿಲ್ಲೆಯ ಪ್ರತಿ ತಾಲ್ಲೂಕಿನ ಪ್ರತಿ ಕೇಂದ್ರಕ್ಕೆ ಪ್ರತಿವರ್ಷ ಖರ್ಚಾಗುವ ಹಣವೆಷ್ಟು?

ಇ) ಈ ಕೇಂದ್ರಗಳು ತೃಪ್ತಿಕರವಾಗಿ ಸೇವೆ ಸಲ್ಲಿಸುತ್ತಿಲ್ಲ ಎಂಬುದನ್ನು ಸರ್ಕಾರ ಅರಿತಿದೆಯೇ? ಹಾಗಿದ್ದಲ್ಲಿ, ಈ ಇಲಾಖೆಯ ಅವಶ್ಯಕತೆ ಇದೆಯೇ?

ಈ) ತೃಪ್ತಿಕರವಾಗಿ ಸೇವೆಸಲ್ಲಿಸಿದ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಸರ್ಕಾರ ಗುರುತಿಸಿದೆಯೇ, ಅಂತಹ ಕೇಂದ್ರಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಉ) ಈ ಬಗ್ಗೆ ಸರ್ಕಾರದ ನೀತಿ ಹಾಗೂ ಕ್ರಮವೇನು?